ತಿಳಿಸುತ್ತೇನೆ. ಮೊಬೈಲ್ ಯೂನಿಟ್ ಮೂಲಕ ಒಂದು ಪ್ರದೇಶದ ಇಂಟೀರಿಯರ್ ಪ್ಲೇಸಗೆ ಹೋಗಿ, ಎಲ್ಲಿ ಆರೋಗ್ಯ ಸೌಲಭ್ಯಗಳು ಸಿಗದೇ ಇರುವಂತಹ ಬಡಜನರು ಇದ್ದಾರೆ ಅಂತಹವರಿಗೆ ಆರೋಗ್ಯ ಸವಲತ್ತುಗಳನ್ನು ವಿಸ್ತರಣೆ ಮಾಡುವುದಕ್ಕೆ ಮೊಬೈಲ್ ಯುನಿಟ್ ಹೆಚ್ಚು ಉಪಯೋಗಕಾರಿ ಎನ್ನುವಂತಹ ವಿಚಾರ ಸರ್ಕಾರದ ಗಮನದಲ್ಲಿ ಇದೆ. ನಾನು ಮೊದಲೇ ಹೇಳಿದಂತೆ ವಿಶ್ವಬ್ಯಾಂಕಿನ ನೆರವು, ಐಪಿಸಿ 9 ಮತ್ತು ವೆಸ್ಟ ಜರ್ಮನ್ ಪ್ರಾಜೆಕ್ಟ್ಸ ಉಪಯೋಗವನ್ನು ಪಡೆದುಕೊಂಡು ಈ ಮೊಬೈಲ್ ಆಸ್ಪತ್ರೆಯನ್ನು ಹೆಚ್ಚು ಶಕ್ತಿಶಾಲಿಯಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಹಾಗೂ ಹಿರಿಯ ಸದಸ್ಯರಾದ ಮಾನ್ಯ ಖರ್ಗೆಯವರು ಹೇಳಿದ ಹಾಗೆ ನಿಜವಾಗಲೂ ಸಹ ಕಳೆದ ಬಾರಿ 60ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಗುಲ್ಬರ್ಗಾ ವಿಭಾಗಕ್ಕೆ ಹೆಚ್ಚು ಆಸ್ಪತ್ರೆಗಳನ್ನು ಮಂಜೂರಾತಿ ಮಾಡಿದೆ. ಅಲ್ಲಿಗೆ ಯಾರೂ ಕೇಳಲೇ ಇಲ್ಲ. ಆದರೂ ಸಹ ಬಳ್ಳಾರಿ, ರಾಯಚೂರು, ಗುಲ್ಬರ್ಗ, ಈ ಕಡೆ ಹೆಚ್ಚು ಆಸ್ಪತ್ರೆಗಳಿಗೆ ಮಂಜೂರಾತಿಯನ್ನು ಕಳೆದ ಬಾರಿ ಮಾಡಿದ್ದೇವೆ. ಈ ಸಾರಿಯೂ ಕೂಡ ವಿಶೇಷವಾಗಿ ಉತ್ತರ ಭಾಗಕ್ಕೆ ಹೆಚ್ಚು ಆಸಕ್ತಿಯನ್ನು ವಹಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯನ್ನು ಉತ್ತರ ಭಾಗದ 5-6 ಜಿಲ್ಲೆಗಳು ಅತ್ಯಂತ ಪ್ರಗತಿಯನ್ನು ಸಾಧನೆ ಮಾಡಿರುವುದರಿಂದ ಹೆಚ್ಚು ಒತ್ತನ್ನು ಕೊಡುವುದಕ್ಕೆ ಸರ್ಕಾರ ನಿರ್ಧಾರ ಮಾಡಿದೆ. ಹಾಗಾಗಿ ನೀಡ್ ಬೇಸ್ಡ ಆಧಾರದ ಮೇಲೆ ನಾವು ಆಸ್ಪತ್ರೆಗಳನ್ನು ಮಂಜೂರಾತಿ ಮಾಡುತ್ತೇವೆ ಎಂದು ಹೇಳುವುದರ ಜೊತೆಗೆ ಮಾನ್ಯ ಸದಸ್ಯರುಗಳು ಎಲ್ಲಾ ಕಡೆ ಆಸ್ಪತ್ರೆಗಳು ಬೇಕು ಎಂದರೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಕೇಂದ್ರ ಸರ್ಕಾರದ ಮಾರ್ಗಸೂಚಿಗಿಂತ ಹೆಚ್ಚು ಆಸ್ಪತ್ರೆಗಳನ್ನು ಹೊಂದಿದ್ದೇವೆ. ಆದರೂ ಕೂಡ ಸರ್ಕಾರ ಪರಿಶೀಲನೆ ಮಾಡಿ ನಾರ್ಮ್ಸ ಇಟ್ಟುಕೊಂಡು ಅದರಂತೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇವೆ.

ಶ್ರೀ ಎಸ್.ಸಿ. ಮುದ್ದ ಹನುಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಇರತಕ್ಕಂಥ ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲ. ಅಲ್ಲಿ ಸುಮ್ಮನೆ ಆಸ್ಪತ್ರೆಗಳು ಎಂದು ಇವೆ. ಒಬ್ಬರು ಡಾಕ್ಟರ್ ಅಥವಾ ಒಬ್ಬ ಎಎನ್ಎಂ ಇಲ್ಲ. ಸುಮ್ಮನೆ ಬೇಗ ಹಾಕಿಕೊಂಡಿದ್ದಾರೆ. ಅಂತಹ ಬೇಕಾದಷ್ಟು ಆಸ್ಪತ್ರೆಗಳು ಇವೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಪ್ರೌಢ ಶಾಲೆಯ ಆರೆಕಾಲಿಕ ಶಿಕ್ಷಕರ ಸಂಖ್ಯೆ

94 - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅರೆಕಾಲಿಕ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಇವರುಗಳಲ್ಲಿ ಖಾಯಂ ಆಗಿರುವವರ ಸಂಖ್ಯೆ ಎಷ್ಟು?

ಇ) ಖಾಯಂ ಆಗದೇ ಇರುವವರ ಸಂಖ್ಯೆ ಎಷ್ಟು?

ಈ) ಖಾಯಂ ಆಗದೇ ಇರುವುದಕ್ಕೆ ಕಾರಣವೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 324

ಆ) 73

ಇ) 251

ಈ) ಈ ಅರೆಕಾಲಿಕ ಶಿಕ್ಷಕರು ಸಾಮಾನ್ಯ ನೇಮಕಾತಿಯಲ್ಲಿ ಸೂಕ್ತ ಕೃಪಾಂಕವನ್ನು ನೀಡಿದರೂ ಸಹ ಅರ್ಹತಾ ಮಟ್ಟವನ್ನು ತಲುಪದಿರುವುದರಿಂದ ಆಯ್ಕೆಯಾಗಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಉತ್ತರ ಬಂದಿದೆ. ಅದರಲ್ಲಿ 251 ಅರೆಕಾಲಿಕ ಶಿಕ್ಷಕರಿಗೆ ಅರ್ಹತೆ ಇಲ್ಲದೆ ಇರುವುದರಿಂದ ಅವರನ್ನು ಖಾಯಮ ಮಾಡುವುದಕ್ಕೆ ಆಗಲಿಲ್ಲ ಎನ್ನುವಂತಹ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ದಯವಿಟ್ಟು ಉಳಿದವರನ್ನು ಯಾವ ರೀತಿ ಅಪಾಯಿಂಟ್ ಮಾಡಿಕೊಂಡರು ಎಂದು ತಿಳಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೆ, 251 ಅರೆಕಾಲಿಕ ಶಿಕ್ಷಕರ ಖಾಯಂ ಆಗದೇ ಇರುವಂತಹ ಉಪಾಧ್ಯಾಯರುಗಳ ಬಗ್ಗೆ ಏನು ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಅರೆಕಾಲಿಕ ಶಿಕ್ಷಕರು ಒಟ್ಟು 324 ಮಂದಿ ಇದ್ದರು. ಅದರಲ್ಲಿ ಒಟ್ಟು 73 ಉಪಾಧ್ಯಾಯರುಗಳಿಗೆ ಹೋದ ಸಾರಿ ಖಾಯಂ ಮಾಡಲಾಗಿದೆ. ಉಳಿದಿರ ತಕ್ಕದ್ದು 251 ಉಪಾದ್ಯಾಯರುಗಳು ಈ ವರ್ಷದಲ್ಲಿ ಇನ್ನು ಎರಡು ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವಂತಹ ವ್ಯವಸ್ಥೆ ಮಾಡಿದ್ದೇವೆ. ಪ್ರೌಢಶಾಲೆಗಳಲ್ಲಿ ಎರಡು ಸಾವಿರ ಉಪಾಧ್ಯಾಯರುಗಳನ್ನು ಕೂಡಲೇ ನೇಮಕ ಮಾಡಿಕೊಳ್ಳುವಂತಹ ಕಾರ್ಯಕ್ರಮ ನಡೆಯುತ್ತಿದೆ, ಅದರಲ್ಲಿ ಯಾರು ಈ ಅರೆಕಾಲಿಕ ಶಿಕ್ಷಕರು ಇದ್ದಾರೆ ಅವರಿಗೆ ಒಂದು ವರ್ಷಕ್ಕೆ 2 ಕೃಪಾಂಕಗಳನ್ನು ಕೊಡಬೇಕೆಂದು ಇದೆ. ಅವರಿಗೆ ಐದು ವರ್ಷ ಸೇವೆ ಮಾಡಿದ್ದರೆ 10 ಕೃಪಾಂಕಗಳನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಇದೆ. ಅದನ್ನು ನಾನು ವರ್ಷಕ್ಕೆ 3 ಕೃಪಾಂಕಗಳನ್ನು ಕೊಡಬೇಕು ಎಂದು ಯೋಚನೆ ಮಾಡುತ್ತಿದ್ದೇನೆ. ಆಗ ಈ ಅರೆಕಾಲಿಕ ಉಪಾಧ್ಯಾಯರುಗಳು ಇದಕ್ಕೆ ಸೇರಿಕೊಂಡರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಇದು ಪ್ರತಿ ವರ್ಷ ಅರೆಕಾಲಿಕ, ಕಂಟ್ರಾಕ್ಟ್ ಬೇಸಿಸ್ ಎಂದು ಒಂದು ರೀತಿಯಾಗಿ ಸಮಸ್ಯಯಾಗಿ ಉಳಿದುಕೊಳ್ಳಬಾರದು. ಈ ಎಲ್ಲಾ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳತಕ್ಕಂಥ ವ್ಯವಸ್ಥೆ ಒಳ್ಳೆಯದು ಎನ್ನುವ ಅಭಿಪ್ರಾಯದಿಂದ ಸಾಧ್ಯವಾದಷ್ಟು ಕೃಪಾಂಕಗಳನ್ನು ಕೊಟ್ಟು ಇವರನ್ನು ನೇಮಕ ಮಾಡಿಕೊಳ್ಳುತ್ತೇವೆ. ಅವರು ಪರಿಮಿತಿಯೊಳಗೆ ಬರಬೇಕು. ನಾವು ಮೆರಿಟ್ ಮತ್ತು ರೋಸ್ಟರ್ ಸಿಸ್ಟಂ ಅನ್ನು ಫಾಲೋ ಮಾಡಿ ಅಪಾಯಿಂಟ್ ಮಾಡಿಕೊಳ್ಳುವುದರಿಂದ, ಇವರಿಗೋಸ್ಕರ ಹೆಚ್ಚು ಕೃಪಾಂಕಗಳನ್ನು ಕೊಟ್ಟು ಅವರನ್ನು ನೇಮಕ ಮಾಡಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅದರಲ್ಲಿ ಯಾರನ್ನಾದರೂ ರಿಲೀವ್ ಮಾಡಿದ್ದೀರಾ? ಬೀದರನಲ್ಲಿ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಏನು ಹೇಳುತ್ತಾರೆ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಕೋರ್ಟ ಆದೇಶದ ಪ್ರಕಾರ ನಡೆದುಕೊಂಡಿದ್ದೇವೆ. ಯಾರನ್ನು ಕೋರ್ಟ ಆದೇಶಕ್ಕೆ ವಿರುದ್ಧವಾಗಿ ಕೆಲಸಕ್ಕೆ ತೆಗೆದುಕೊಂಡಿಲ್ಲ

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ಇವರು ಉತ್ತರದಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಅರ್ಹತೆ ಇಲ್ಲದೆ ಇರುವಂತಹ ಉಪಾಧ್ಯಾಯರುಗಳಿಗೆ ಕೃಪಾಂಕಗಳನ್ನು ಕೊಟ್ಟು ನೇಮಕ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಅದರೆ ಹಿಂದೆ ಅರ್ಹತೆ ಇಲ್ಲದೆ ಇರುವಂತಹ ಉಪಾಧ್ಯಾಯರುಗಳಿಗೆ ನೇಮಕ ಮಾಡುವಂತಹ ಸಂದರ್ಭದಲ್ಲಿ ಅರ್ಹತೆ ಇರತಕ್ಕಂಥ ಅಧ್ಯಾಪಕರು ಇರಲಿಲ್ಲವೇ? ಏಕೆ ಅರ್ಹತೆ ಇಲ್ಲದೆ ಇರುವಂತಹ ಉಪಾಧ್ಯಾಯರನ್ನು ಆ ಸಂದರ್ಭದಲ್ಲಿ ನೇಮಕ ಮಾಡಿಕೊಂಡರು. ಇದಕ್ಕೆ ದಯಮಾಡಿ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ತಾವು ತುಂಬಾ ಧಾರಾಳವಾಗಿ ಅವರ ಸೇವಾವಧಿಯನ್ನು ನೋಡಿ ಪ್ರತಿ ವರ್ಷ ಎರಡು ಅಥವಾ ಮೂರು ಕೃಪಾಂಕಗಳನ್ನು ಕೊಟ್ಟು ಅವರನ್ನು ನೇಮಕ ಮಾಡಬೇಕು ಎನ್ನುವ ಸದುದ್ದೇಶವನ್ನು ಇಟ್ಟು ಕೊಂಡಿದ್ದೇವೆಂದು ತಿಳಿಸಿದ್ದೀರಿ. ನಾನು ವಿನಂತಿ ಮಾಡುವಂಥದ್ದು ಏನೆಂದರೆ ಎರಡು ಸಾವಿರ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಬಹಳ ವರ್ಷಗಳಿಂದ ಸೇವೆಯನ್ನು ಮಾಡಿರುವಂತಹ ಈ ಉಪಾಧ್ಯಾಯರುಗಳಿಗೆ ನ್ಯಾಯ ಸಿಗಬೇಕು. ಅವರನ್ನು ತೆಗೆದುಕೊಳ್ಳಬೇಕಾದರೆ ಕಾನೂನಿನ ಚೌಕಟ್ಟಿನಲ್ಲಿ ಹಾಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಹೆಚ್ಚು ಕೃಪಾಂಕಗಳನ್ನು ಕೊಡುವುದರಿಂದ ಎಷ್ಟು ಜನರನ್ನು ತೆಗೆದುಕೊಳ್ಳಬಹುದು ಎನ್ನುವುದನ್ನು ಆಧಾರವಾಗಿ ಇಟ್ಟುಕೊಂಡು ಈ 251 ಜನರನ್ನು ನಾಳೆ ಎರಡು ಸಾವಿರ ಉಪಾಧ್ಯಾಯರನ್ನು ತೆಗೆದುಕೊಳ್ಳವಂತಹ ಕಾಲದಲ್ಲಿ ನೇಮಕ ಮಾಡಿಕೊಂಡರೆ ಅವರು ಗೌರವದಿಂದ ಬದುಕುವುದಕ್ಕೆ ವ್ಯವಸ್ಥೆ ಮಾಡುವುದರ ಬಗ್ಗೆ ತಾವು ಚಿಂತನೆ ಮಾಡಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ: ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಎರಡು ಕೃಪಾಂಕಗಳನ್ನು ಮೊದಲು ಕೊಡುತ್ತಿದ್ದು ಈಗ ನಾನು ಮೂರು ಕೃಪಾಂಕಗಳನ್ನು ಕೊಟ್ಟು ಇನ್ನು ಹೆಚ್ಚಿನ ರೀತಿಯಲ್ಲಿ ಅವರನ್ನು ಸೇರಿಸಿಕೊಳ್ಳಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ನಾವು ಇದನ್ನು ಕಾನೂನಿನ ಚೌಕಟ್ಟಿನ ಒಳಗಡೆ ಮಾಡಬೇಕಾಗುತ್ತದೆ. ಅದರ ಜೊತೆಗೆ ಅನೇಕ ಜನ ಹೊಸಬರನ್ನು ಸಹ ನಾವು ಸೇರಿಸಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಹೋದಸಾರಿ ಎರಡು ಕೃಪಾಂಕಗಳನ್ನು ಕೊಟ್ಟು ತೆಗೆದುಕೊಂಡಾಗ 73 ಉಪಾಧ್ಯಾಯರುಗಳು ಬಂದಿದ್ದರು. ಈಗ ಮೂರು ಕೃಪಾಂಕಗಳನ್ನು ಕೊಟ್ಟರೆ ಇನ್ನು ಹೆಚ್ಚು ಜನ ಬರಬಹುದು ಎನ್ನುವ ದೃಷ್ಟಿಯಿಂದ ಅಂತಹ ಯೋಚನೆ ಮಾಡುತ್ತಿದ್ದೇವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ 2 ನೇ ಪಟ್ಟಿಯಲ್ಲಿರುವ 90 ಪ್ರಶ್ನೆಗಳ ಪೈಕಿ 66 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಳ್ಳಂಬೆಳ್ಳ ಪ್ರಸೂತಿ ಗೃಹಕ್ಕೆ ಮಹಿಳಾ ವೈದ್ಯಾಧಿಕಾರಿಗಳು

378 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳದಲ್ಲಿ ಪ್ರಸೂತಿಗೃಹ ಮಂಜೂರಾಗಿರುವುದು ಯಾವ ಸಾಲಿನಲ್ಲಿ. ಆದರ ಕೆಲಸ ಪ್ರಾರಂಭವಾಗಿದೆಯೇ?

ಆ) ಈ ಪ್ರಸೂತಿಗೃಹಕ್ಕೆ ಮಹಿಳಾ ವೈದ್ಯಾಧಿಕಾರಿಗಳ ಮತ್ತು ತತ್ಸಮಾನ ಹುದ್ದೆಗಳು ಇದುವರೆಗೂ ಮಂಜಾರಾಗಿರುವುದಿಲ್ಲ ಕಾರಣವೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು). :

ಅ) 1993-94ನೇ ಸಾಲಿನಲ್ಲಿ ಕಳ್ಳಂಬೆಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಂದಿಕೊಂಡಂತೆ 10 ಹಾಸಿಗೆಗಳ ಪ್ರಸೂತಿಗೃಹ ಮಂಜೂರಾಗಿರುವುದಿಲ್ಲ.

ಆ) ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಯನ್ನು ಮಂಜೂರು ಮಾಡಲು ಸರ್ಕಾರದ ಪರಿಶೀಲನೆಯಲ್ಲಿದೆ.

ಅನುದಾನ ರಹಿತ ಬೋಧಕೇತರ ಹುದ್ದೆ ಕಾಯಂ ಗೊಳಿಸುವುದು

379 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಡಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನುದಾನ ರಹಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಭೋದಕೇತರ ವರ್ಗದ ನೌಕರರು ಸಾಮೂಹಿಕ ಆತ್ಮಹತ್ಯೆಗೆ ಪ್ರಯತ್ನಿಸಿ ಬಂಧನಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಅಂತಹ ಭೋದಕೇತರ ಹುದ್ದೆಗಳು ಎಷ್ಟು ಅವರುಗಳು ಯಾವಾಗಿನಿಂದ ಕೆಲಸ ಮಾಡುತ್ತಿರುವರು.

ಇ) ಅವರ ಹುದ್ದೆಗಳನ್ನು ಖಾಯಂಗೊಳಿಸಲು ಹಾಗೂ ಅನುಧಾನ ಬಿಡುಗಡೆ ಮಾಡಲು ವಿಳಂಬ ಮಾಡದೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :